ಎಂ ವಿ ಸಿ ಸಂಖ್ಯೆ:**277 /2024** ಪಿ .ಡಬ್ಲ್ಯೂ:**1**
ಸಾಕ್ಷಿಯನ್ನು ದಿಃ **02.09.2025** ರಂದು ಕರೆಸಿ ಪ್ರಮಾಣೀಕರಿಸಲಾಯಿತು.
**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಕೆ ವಿ ಆರ್ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಮತ್ತು ನಾನು ಅದಕ್ಕೆ ನನ್ನ ಸಹಿ ಮಾಡಿರುತ್ತೇನೆ.

ಪ್ರ.ವ.ವರದಿಯ ದೃ. ನಕಲನ್ನು ನಿಪಿ.1 ಎಂದು, ಪಿರ್ಯಾದುವಿನ ದೃ.ನಕಲನ್ನು ನಿಪಿ.2 ಎಂದು, ಸ್ಥಳಪಂಚನಾಮೆಯ ದೃ. ನಕಲನ್ನು ನಿಪಿ.3 ಎಂದು, ಗಾಯದ ಪ್ರಮಾಣಪತ್ರದ ದೃ. ಪ್ರತಿಯನ್ನು ನಿಪಿ.4 ಎಂದು, ಎಂ ವಿ ಎ ವರದಿಯ ದೃ.ನಕಲನ್ನು ನಿಪಿ.5 ಎಂದು ಅಂತಿಮ ವರದಿಯ ದೃ.ನಕಲನ್ನು ನಿಪಿ.6 ಎಂದು, ಆರ್ ಎಲ್ ಜಾಲಪ್ಪ ಆಸ್ಪತ್ರೆಯ ಡಿಸ್ ಚಾರ್ಜ್ ಸಮರಿಯನ್ನು ನಿಪಿ.7 ಎಂದು, ಎಸ್ ಡಿ ಯು ಇ ಟಿ ಆಸ್ಪತ್ರೆಯ ಒಟ್ಟು 65 ಟ್ಯಾಕ್ಸ್ ಇನ್ ವಾಯ್ಸ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.8 ಎಂದು, ಅಪೊಲೋ ಫಾರ್ಮಸಿಯ ಇನ್ ವಾಯ್ಸ್ ನ್ನು ನಿಪಿ.9 ಎಂದು, ಅರ್ಜಿದಾರನ ಪಾನ್ ಕಾರ್ಡ್ ನ ನೋಟರಿ ನಕಲು ಪ್ರತಿಯನ್ನು ನಿಪಿ.10 ಎಂದು ಗುರುತಿಸಲಾಯಿತು. ಎಸ್ ಎನ್ ಆರ್ ಆಸ್ಪತ್ರೆಯವರು ನೀಡಿರುವ ಯುನಿಕ್ ಡಿಸಬಿಲಿಟಿ ಗುರುತಿನ ಚೀಟಿಯ ನೋಟರಿ ನಕಲು ಪ್ರತಿಯನ್ನು ನಿಪಿ.11 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಯನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd/-

**(ಶಿವಕುಮಾರ.ಬಿ.)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ ಕೆ.ಜಿ.ಎಫ್(ಪೀಠ)**